# ಕಟ್ ಆಫ್ ರೂಟ್ ರಂಗಭೂಮಿಗಿಲ್ಲ

**ವಿಕ್ರಮ್ ಸೂರಿ**
ಸಿರಿ ಕನ್ನಡದ
'ಮತ್ತೆ ಮಾಯಾಮೃಗ'ದ
ಶಾಮ

◆ ನೀವು ಬೇರೆ ಬೇರೆ ರಂಗ ತಂಡದಲ್ಲಿ ಕೆಲಸ ಮಾಡಲು ಹೇಗೆ ಸಾಧ್ಯ ಮಾಡಿಕೊಳ್ಳುತ್ತೀರಿ?

ನಮ್ಮ ತಂದೆ ಸೂರಿ ಹಲವು ತಂಡಗಳಲ್ಲಿ ಅಭಿನಯಿಸುತ್ತಿದ್ದರು. ಆ ಒಡನಾಟ ಇದ್ದಿದ್ದರಿಂದ ಅದೇ ಸಂಪರ್ಕ ನನಗೂ ಒಲಿದು ಬಂತು. ಅದನ್ನೇ ಮುಂದುವರಿಸಿಕೊಂಡು ಬಂದೆ. ಇದೆಲ್ಲ ನನ್ನ ಬೆಳವಣಿಗೆಗೆ ಪೂರ್ವಸಿದ್ಧತೆಯಂತೆ ಪೂರಕವಾಗಿದೆ. 90ರ ದಶಕದ ಸುಮಾರಿನಲ್ಲಿ ರಂಗಭೂಮಿ ತುಂಬ ಜೋರಾಗಿತ್ತು. ಕಲಾವಿದರಿಗೆ ಈಗಿನಂತೆ ಬೇರೆ ಬೇರೆ ವೇದಿಕೆಗಳು ಇರಲಿಲ್ಲ. ಹಾಗೆಯೇ ಅಂದಿನ ಸಾಮಾಜಿಕ ಸಂದರ್ಭ ಕೂಡ ರಂಗಭೂಮಿ ಸಮರ್ಥವಾಗಿ ಬಳಸಿಕೊಳ್ಳಲು ಪೂರಕವಾಗಿತ್ತು. ಪತ್ರಿಕಾ ಮಾಧ್ಯಮದಲ್ಲಿಯೂ ರಂಗಭೂಮಿಗೆ ಪ್ರಾಮುಖ್ಯತೆ ಸಿಗ್ತಾ ಇತ್ತು. ನಗರದಲ್ಲಿ ಇಂದು ವಿಭಾಗದಲ್ಲಿ ನಾಟಕ ಪ್ರದರ್ಶನ ಇದೆ ಎನ್ನುವ ಪ್ರಕಟಣೆ ಇದ್ದರೆ ಸಾಕಿತ್ತು. ಅದನ್ನೇ ನೋಡಿ ಪ್ರೇಕ್ಷಕರು ಬರ್ತಾ ಇದ್ದರು. ಅದಕ್ಕಾಗಿ ಪ್ರಚಾರಾಂದೋಲನದ ಅಗತ್ಯವೇ ಇರಲಿಲ್ಲ. ಪ್ರದರ್ಶನದ ನಂತರ ವಿಮರ್ಶೆ ಬರುತ್ತಿತ್ತು.

◆ ನಟನಾಗಿ ಬೆಳೆಯಲು ನೆರವಾದ ವೇದಿಕೆಗಳ ಬಗ್ಗೆ ಹೇಳಿ.

ಶಾಲೆಯಲ್ಲಿ ಇದ್ದಾಗಲೇ ರಂಗಭೂಮಿ ಚಟುವಟಿಕೆಯಲ್ಲಿ ಆಸಕ್ತಿ ಬೆಳೆಯಿತು. ನಾನು ಎಂಟನೇ ವಯಸ್ಸಿನಲ್ಲಿಯೇ ಭರತನಾಟ್ಯ ಅಭ್ಯಾಸವನ್ನು ಆರಂಭಿಸಿದೆ. ಪ್ರೇಮಾಕಾರಂತ ಅವರ 'ಬೆನಕ ನಾಟಕ ಕೇಂದ್ರ'ದ ಬೇಸಿಗೆ ಶಿಬಿರದಲ್ಲಿ ಭಾಗವಹಿಸಲು ಆರಂಭಿಸಿದೆ. ಪರಿಪೂರ್ಣ ಕಲಾವಿದ ಆಗಬೇಕು ಅಂದರೆ, ಅಭಿನಯದ ಜೊತೆ ಅವನಿಗೆ ಮೇಕಪ್ ಗೊತ್ತಿರಬೇಕು. ಕಾಸ್ಟ್ಯೂಮ್, ಡಿಸೈನ್ ಗೊತ್ತಿರಬೇಕು ಎನ್ನುವುದು ಅಲ್ಲಿ ಗೊತ್ತಾಯಿತು. ಬಿ.ವಿ. ಕಾರಂತ ರಂಗಗೀತೆಗಳನ್ನು ಹೇಳಿಸುತ್ತಿದ್ದರು. ಅದರಿಂದಾಗಿ 'ಬೆನಕ', 'ನಟರಂಗ', 'ಸ್ಪಂದನ' ಹೀಗೆ ಬೇರೆ ಬೇರೆ ತಂಡಗಳ ಕೆಲಸ ಮಾಡಿದೆ. 'ಸೂರ್ಯ ಕಲಾವಿದರ ಸಂಸ್ಥೆ'ಯನ್ನು ನನ್ನ ತಂದೆ ಆರಂಭಿಸಿದ್ದರು. ಅವರ ಉದ್ಯೋಗದ ಜೊತೆ ಅದನ್ನು ನಿರ್ವಹಿಸುವುದು ಕಷ್ಟ ಆಗುತ್ತಿತ್ತು. ನಟಿ ನಮಿತಾ ರಾವ್ ನನ್ನ ಸಂಗಾತಿಯಾದ ಬಳಿಕ ಅದನ್ನು ಬಲಿಷ್ಠ ಮಾಡಿದೆವು. ನೃತ್ಯ ನಾಟಕಗಳನ್ನು ಆರಂಭಿಸಿದೆವು. ಆಧುನಿಕ ಸಾಧ್ಯತೆಯನ್ನು ಬಳಸಿಕೊಂಡೆವು. ಎಲ್ಇಡಿ ಹೊಸ ತಂತ್ರಜ್ಞಾನ ಬಳಸಿ ಸಿನಿಮಾ ರೂಪದಲ್ಲಿ ನೃತ್ಯ ನಾಟಕ ರೂಪಕಗಳನ್ನು ಪ್ರದರ್ಶನ ಮಾಡುತ್ತಿದ್ದೇವೆ. ಐತಿಹಾಸಿಕ, ಪೌರಾಣಿಕ ಸಂದರ್ಭವನ್ನು ಇಟ್ಟುಕೊಂಡು 'ಕರ್ನಾಟಕ ದರ್ಶನ', 'ಬೇಲೂರು ಶಿಲಾ ಬಾಲಿಕೆ ವೈಭವ' ಹೀಗೆ ಹತ್ತಾರು ನೃತ್ಯ ನಾಟಕಗಳನ್ನು ಕೊಟ್ಟಿದ್ದೇವೆ. ಹಿನ್ನೆಲೆಯಲ್ಲಿ ಪರದೆಯ ಬದಲಿಗೆ ಸ್ಕ್ರೀನ್ ಬಳಸುತ್ತೇವೆ. ಇದರಿಂದ ವಾಸ್ತವಕ್ಕೆ ಹತ್ತಿರವಾಗುವ ವಿಡಿಯೊ, ಚಿತ್ರಗಳನ್ನು ಬಳಸುವುದರಿಂದ ಪ್ರದರ್ಶನ ಅದ್ಭುತವಾಗಿ ಕಾಣಿಸುತ್ತದೆ. ಕಿರುತೆರೆಗೆ ಬಾಲ ನಟನಾಗಿ ಪ್ರವೇಶ ಮಾಡಿದೆ. ಮೊದಲು ಪ್ರಕಾಶ್ ರೈ ಅವರ ಜೊತೆ 'ಬಿಸಿಲುಗುದುರೆ'ಯಲ್ಲಿ ನಟಿಸಿದೆ. ಅದು 12 ಕಂತುಗಳ ಧಾರಾವಾಹಿ. ಮೆಗಾ ಸೀರಿಯಲ್ 'ಮಾಯಾಮೃಗ'ದಲ್ಲಿ ಕಾಣಿಸಿಕೊಂಡೆ. ನಂತರ 'ಜನನಿ', 'ಮನೆತನ'ದಲ್ಲಿ ಮಾಡಿದೆ. ಸಿನಿಮಾ ಅಂದರೆ 'ಚಿನ್ನಾರಿಮುತ್ತ', 'ಕೊಟ್ರೇಶಿ ಕನಸು' ಮಾಡಿದೆ.



◆ ಬಹುಭಾಷೆ – ಕಲೆಯನ್ನು ಹೇಗೆ ಕಲಿತದ್ದು?

ರಾಜ್‌ಕುಮಾರ್, ಕಮಲ ಹಾಸನ್ ಹೇಳುವಂತೆ ಪರಿಪೂರ್ಣ ನಟ ಆಗಬೇಕು ಅಂದರೆ ನೃತ್ಯ, ಗಾಯನ ಸೇರಿ ಬೇರೆ ಬೇರೆ ಕಲೆಗಳು ಗೊತ್ತಿರಬೇಕು. ರಂಗಭೂಮಿ ಕಲಾವಿದನಿಗೆ ಆ ಮೂಲತತ್ವವನ್ನೆಲ್ಲ ಕಲಿಸುತ್ತದೆ. ನಾಟಕವನ್ನು ಕಲಿಯುವುದರಿಂದ ಅದು ಸಾಧ್ಯ ಆಗುತ್ತದೆ. ಅದು ನಟನೆಯ ಜೊತೆ ಒಬ್ಬ ವ್ಯಕ್ತಿ ಪ್ರಾಮಾಣಿಕವಾಗಿ ಹೇಗೆ ಜೀವನ ಮಾಡಬೇಕು ಅನ್ನುವುದನ್ನು ಕಲಿಸುತ್ತದೆ.

◆ ನೀವು ಕುಣಿಯುತ್ತೀರಿ, ಜೊತೆಗೆ ಕುಣಿಸುತ್ತೀರಿ ಅದರಲ್ಲಿ ನೀವು ಎಲ್ಲಿ ನಿಲ್ಲಲು ಬಯಸುತ್ತೀರಿ?

ನಾನು ಒಂದು ಕೆಲಸ ಮಾಡುವಾಗ ಮತ್ತೊಂದು ಕೆಲಸ ಮಾಡುವುದಿಲ್ಲ. 'ಚೌಕಾಬಾರ'ವನ್ನು ನಿರ್ದೇಶನ ಮಾಡುತ್ತಿದ್ದೇನೆ. ಅಂದರೆ ಅದರಲ್ಲಿ ನಾನು ಅಭಿನಯಿಸಲ್ಲ. ಅಲ್ಲಿ ನಿರ್ದೇಶಕನಾಗಿ ನನ್ನ ಕೆಲಸ ಮಾಡುತ್ತೇನೆ. ನಟನಾಗಿದ್ದಾಗ ನಾನೊಬ್ಬ ನಿರ್ದೇಶಕ ಆಗಿದ್ದರೂ ನಿರ್ದೇಶಕರ ಅಪೇಕ್ಷೆಯಂತೆ ಕೇಳುತ್ತೇನೆ. ಅವರು ಹೇಳಿದ ಫ್ರೇಮಿಗೆ ತಕ್ಕಂತೆ ನಟಿಸುತ್ತೇನೆ. ನೃತ್ಯದಲ್ಲಿಯೂ ನಾನು ಸಂಯೋಜಿಸದೆ ಬೇರೊಬ್ಬರು ಮಾಡಿದರೆ, ಆಹ್ವಾನಿತನಾಗಿ ಅವರ ಅಗತ್ಯಕ್ಕೆ ನೃತ್ಯವನ್ನು ಮಾಡುತ್ತೇನೆ. ಅವರೇ ಏನಾದರೂ ಸಲಹೆ ಕೇಳಿದರೆ ಮಾತ್ರ ನನ್ನ ಅನಿಸಿಕೆಗೆ ಅವಕಾಶ ಇರುತ್ತದೆ.

◆ ಸಿನಿಮಾ–ಕಿರುತೆರೆ–ರಂಗಭೂಮಿ ಅಂತರ ಸಂಬಂಧ ಮತ್ತು ಭಿನ್ನತೆ ಗುರುತಿಸುವುದಾದರೆ...

ಜೀವನಕ್ಕೆ ದುಡಿಮೆ ಅಗತ್ಯ. ಹಾಗಾಗಿ ಸಂಪಾದನೆಯ ದೃಷ್ಟಿ ಬೇರೆ. ವೈಯಕ್ತಿಕವಾಗಿ ರಂಗಭೂಮಿ ಇಷ್ಟ. ಹಾಗೆಂದು ಅದನ್ನು ಅಪ್ಪಿಕೊಂಡರೆ ಬದುಕು ನಡೆಸುವುದು ಕಷ್ಟಕರ. ಅಲ್ಲಿ ತೃಪ್ತಿ ಇದೆ. ಹಣ ಇಲ್ಲ. ನನಗೂ ಅನೇಕ ಜವಾಬ್ದಾರಿಗಳು ಇವೆ. ಆರ್ಥಿಕ ಕಾರಣಕ್ಕೆ ಅದರ ಆಚೆಯ ಮಾಧ್ಯಮ ಬೇಕಾಗುತ್ತದೆ. ಚಿಕ್ಕದಾಗಿ ಆದರೂ ಅವಕಾಶ ಸಿಕ್ಕಾಗೆಲ್ಲ ರಂಗಭೂಮಿ ಕೆಲಸ ಮಾಡಬೇಕು. ನಾವು ಎಲ್ಲಿದ್ದೇವೆ ಎನ್ನುವುದನ್ನು ತಿಳಿಯಲಾದರೂ ಅದು ಅಗತ್ಯ. ಇಲ್ಲಿ ನಮ್ಮ ಅಭಿನಯಕ್ಕೆ ಪ್ರತ್ಯಕ್ಷ ಪ್ರತಿಫಲ ಸಿಗುತ್ತದೆ. ಬೇರೆ ಮಾಧ್ಯಮಗಳಲ್ಲಿ ಕಟ್ ಆಫ್ ರೂಟ್ ಇರುತ್ತದೆ. ಅಲ್ಲಿ ಅಭಿನಯದ ಸೌಂದರ್ಯ ವೃದ್ಧಿಗೆ ಬೇರೆ ಬೇರೆ ಅವಕಾಶಗಳು ಸಿಗುತ್ತವೆ. ಅದು ರಂಗಭೂಮಿಯಲ್ಲಿ ಇಲ್ಲ. ಆದರೆ ಸ್ವಾತಂತ್ರ್ಯ ಹೆಚ್ಚು ಇರುತ್ತದೆ. ಸಿನಿಮಾ ಮತ್ತು ಕಿರುತೆರೆಯಲ್ಲಿ ಅದಕ್ಕೆ ಮಿತಿ ಇರುತ್ತದೆ.

■ **ರಾಘವೇಂದ್ರ ಕೆ.**